**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಶೇಷ ನ್ಯಾಯಾಲಯ, ಬಳ್ಳಾರಿ**

**ವಿಶೇಷ ಮೊಕದ್ದಮೆ ಸಂಖ್ಯೆಃ- 510/2024**

**ಪ್ರಾಸಾಃ- 13 ಚಾಸಾಃ- 18**

| | | |
|---|---|---|
| ಸಾಕ್ಷಿಯ ಹೆಸರು | : | ಚಂದ್ರಕಾಂತ್ |
| ತಂದೆಯ ಹೆಸರು | : | ಗಂಗಾಧರಪ್ಪ ನಂದಾರೆಡ್ಡಿ |
| ವಯಸ್ಸು | : | 55 ವರ್ಷ |
| ವೃತ್ತಿ | : | ಡಿ ವೈ ಎಸ್ ಪಿ, ಬಸವನಬಾಗೇವಾಡಿ |
| ವಾಸಸ್ಥಳ | : | ಬಸವನಬಾಗೇವಾಡಿ |

**ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ- 10.7.2026**

**ಮುಖ್ಯ ವಿಚಾರಣೆಃ ವಿಶೇಷ ಅಭಿಯೋಜಕರಿಂದ**

ನಾನು ದಿಃ 27-11-2023 ರಿಂದ 16-2-2026 ರವರೆಗೆ ನಾನು ಬಳ್ಳಾರಿ ಉಪ ವಿಭಾಗದಲ್ಲಿ ಡಿ ವೈ ಎಸ್ ಪಿಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 30-3-20224 ರಂದು ಈ ಪ್ರಕರಣದ ಕಡತವನ್ನು ಚಾಸಾ 17 ರವರಿಂದ ಪಡೆದು, ಮಾನ್ಯ ಎಸ್ ಪಿ ರವರ ಆದೇಶ ಪಡೆದು ಕಡತಕ್ಕೆ ಅಳವಡಿಸಿಕೊಂಡು ಅಲ್ಲಿಯವರೆಗೆ ಆಗಿದ್ದ ತನಿಖೆಯನ್ನು ಪರಿಶೀಲನೆ ಮಾಡಿದ್ದೇನೆ. ಸದರಿ ಆದೇಶವನ್ನು ನಿಪಿ-14 ಎಂದು ಗುರುತಿಸಲಾಯಿತು.

ದಿಃ 31-3-2024 ರಂದು ಘಟನಾ ಸ್ಥಳವಾದ ರಾಮಾಂಜಿನೇಯ ನಗರಕ್ಕೆ ಭೇಟಿಕೊಟ್ಟು ಚಾಸಾ 1 ರವರು ತೋರಿಸಿದ ಸ್ಥಳದಲ್ಲಿ ಚಾಸಾ 2 ಮತ್ತು 3 ರವರನ್ನು ಸ್ಥಳಕ್ಕೆ ಬರಮಾಡಿಕೊಂಡು ಅವರಿಗೆ ನಿಪಿ-4 ಮತ್ತು 5 ರಂತೆ ನೋಟೀಸ್ ಗಳನ್ನು ಕೊಟ್ಟು ಅವರು ಒಪ್ಪಿಕೊಂಡ ಕಾರಣ ಅವರ ಸಮಕ್ಷಮ ಮದ್ಯಾಹ್ನ 12-00 ರಿಂದ 1-00 ವರೆಗೆ ನಿಪಿ-2 ರಂತೆ ಪಂಚನಾಮೆ ಕ್ರಮ ಜರುಗಿಸಿದೆ ಹಾಗೂ ನಿಪಿ-3 ರ ಪೋಟೋ ತೆಗೆಸಿದೆ. ಸಾಕ್ಷಿಯ ಸಹಿಯನ್ನು ನಿಪಿ-2(೧) ಎಂದು ಗುರುತಿಸಲಾಯಿತು. ಪೋಟೋವನ್ನು ಚಾಸಾ 15 ರವರ ಮೊಬೈಲ್ ನಲ್ಲಿ ತೆಗೆಸಿದ್ದೇನೆ. ಪಂಚನಾಮೆಯನ್ನು ಠಾಣೆಯಿಂದ ತೆಗದದುಕೊಂಡು ಹೋಗಿದ್ದ ನಮ್ಮ ಲ್ಯಾಪ್‌ಟಾಪ್ ನಲ್ಲಿ ಚಾಸಾ 16 ರವರ ಮೂಲಕ ಬೆರಳಚ್ಚು ಮಾಡಿಸಿದೆ. ನಂತರ ಪೋಲೀಸ್ ಠಾಣೆಗೆ ಬಂದು ಪ್ರಿಂಟ್ ತೆಗೆಸಿ ಸಾಕ್ಷಿದಾರರ ಸಹಿ ಪಡೆದುಕೊಂಡೆ.

ಸ್ಥಳದಲ್ಲಿ ಕಚ್ಚಾ ನಕಾಶೆಯನ್ನು ತಯಾರು ಮಾಡಿದ್ದೆ. ಅದನ್ನು ನಿಪಿ-15 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-15(ಎ) ಎಂದು ಗುರುತಿಸಲಾಯಿತು.

ಅದೇ ದಿವಸ ಚಾಸಾ 14 ಮತ್ತು 15 ರವರ ಹೇಳಿಕೆಗಳನ್ನು ಪಡೆದುಕೊಂಡೆ.

ದಿಃ 1-4-2024 ರಂದು ಚಾಸಾ 1 ರವರ ಮರು ಹೇಳಿಕೆಯನ್ನು ಪಡೆದುಕೊಂಡೆ ಹಾಗೂ ಚಾಸಾ 4 ರಿಂದ 9 ರವರ ಹೆಳಿಕೆಗಳನ್ನು ಪಡೆದುಕೊಂಡೆ. ಚಾಸಾ 9 ರವರು ನಿಪಿ-8 ರಂತೆ ಹೇಳಿಕೆ ಕೊಟ್ಟಿದ್ದಾರೆ.

ದಿಃ 2-4-2024 ರಂದು ಪಿರ್ಯಾದುದಾರು ಮತ್ತು ಆರೋಪಿತರ ಜಾತಿ ಪ್ರಮಾಣ ಪತ್ರ ಸಲ್ಲಿಸುವಂತೆ ಚಾಸಾ 10 ತಹಸೀಲ್ದಾರ್, ಬಳ್ಳಾರಿ ರವರಿಗೆ ಮನವಿ ಸಲ್ಲಿಸಿದೆ. ಅದೇ ರೀತಿ ಕೃತ್ಯ ನಡೆದ ಜಾಗದ ದಾಖಲೆ ನೀಡುವಂತೆ ಚಾಸಾ 11 ರವರಿಗೆ ಮನವಿ ಸಲ್ಲಿಸಿದೆ.

ಕೃತ್ಯ ನಡೆದ ಸ್ಥಳದ ನಕಾಶೆ ತಯಾರಿಸಿಕೊಡುವಂತೆ ಪಿ ಡಬ್ಲ್ಯೂ ಡಿ ರವರಿಗೆ ಮನವಿ ಸಲ್ಲಿಸಿದೆ. ಚಾಸಾ 4 ಮತ್ತು 5 ರವರಿಗೆ ಸಂಬಂಧಪಟ್ಟ ಗಾಯದ ಪ್ರಮಾಣಪತ್ರ ಪೂರೈಸಲು ವೈದ್ಯಾಧಿಕಾರಿಗಳಿಗೆ ಮನವಿ ಸಲ್ಲಿಸಿದೆ.

ದಿಃ 15-4-2024 ರಂದು ಮಾನ್ಯ 4 ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯಕ್ಕೆ ಅಸಲು ದಾವೆ 261/2023 ರ ದಾಖಲೆ ಒದಗಿಸುವಂತೆ ಮನವಿ ಸಲ್ಲಿಸಿದ್ದೆ. ಸದರಿ ಮನವಿಯನ್ನು ನಿಪಿ-150 ಎಂದು ಗುರುತಿಸಲಾಯಿತು.

ದಿಃ 18-4-2024 ರಂದು ಗಾಯದ ಪ್ರಮಾಣ ಪತ್ರಗಳನ್ನು ವೈದ್ಯಾಧಿಕಾರಿಗಳಿಂದ ನಿಪಿ-6 ಮತ್ತು 7 ರಂತೆ ಪಡೆದು ಕಡತಕ್ಕೆ ಅಳವಡಿಸಿಕೊಂಡೆ.

ದಿಃ 15-5-2024 ರಂದು ಜಾತಿ ಪ್ರಮಾಣಪತ್ರ ಮತ್ತು ಹಾಗೂ ಹೆಚ್ಚುವರಿ ದಾಖಲಾತಿಗಳನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡೆ. ಮನವಿ ಪತ್ರವನ್ನು ನಿಪಿ-16 ಎಂದು, ಸಾಕ್ಷಿಯ ಸಹಿಯನ್ನು ನಿಪಿ-16(ಎ) ಎಂದು, ತಹಸೀಲ್ದಾರ್ ರವರ ವರದಿಯನ್ನು ನಿಪಿ-17 ಎಂದು, ಪಿರ್ಯಾದುದಾರರು ಹಾಗೂ ಅವರ ಮನೆಯವರ ಜಾತಿಗೆ ಸಂಬಂಧಪಟ್ಟ ಎರಡು ವರದಿಗಳನ್ನು ಸೇರಿಸಿ ಒಟ್ಟಿಗೆ ನಿಪಿ-18 ಎಂದು ಗುರುತಿಸಲಾಯಿತು. ಆರೋಪಿಗಳಿಗೆ ಸಂಬಂಧಪಟ್ಟ ಎರಡು ಜಾತಿ ದೃಢೀಕರಣ ಪತ್ರಗಳನ್ನು ನಿಪಿ-19 ಎಂದು ಗುರುತಿಸಲಾಯಿತು.

ಅದೇ ದಿವಸ ಚಾಸಾ 11 ರವರಿಂದ ವರದಿಯನ್ನು ಪಡೆದುಕೊಂಡೆ. ಚಾಸಾ 11 ರವರಿಗೆ ಸಲ್ಲಿಸಿದ್ದ ಮನವಿಯನ್ನು ನಿಪಿ-20 ಎಂದು ಮತ್ತು ಚಾಸಾ 11 ರವರು ಸಲ್ಲಿಸಿದ್ದ ವರದಿಯನ್ನು ನಿಪಿ-21 ಎಂದು ಗುರುತಿಸಲಾಯಿತು.

ದಿಃ 21-5-2024 ರಂದು ಚಾಸಾ 16 ರವರ ಹೇಳಿಕೆಯನ್ನು ಪಡೆದುಕೊಂಡೆ.

ದಿಃ 10-5-2024 ರಂದು ಆರೋಪಿಗಳು ಮಾನ್ಯ ನ್ಯಾಯಾಲಯದಿಂದ ನಿರೀಕ್ಷಣಾ ಜಾಮೀನು ಪಡದು ಹಾಜರಾಗಿದ್ದು ಅವರನ್ನು ವಿಚಾರಣೆ ಮಾಡಿ ಜಾಮೀನು ಮುಚ್ಚಳಿಕೆ ಬರೆಸಿಕೊಂಡು ಬಿಡುಗಡೆ ಮಾಡಿದ್ದೇನೆ.

ತನಿಖೆ ಪೂರ್ಣಗೊಂಡ ಕಾರಣ ಲಭ್ಯ ಇದ್ದ ದಾಖಲಾತಿಗಳ ಆಧಾರದಲ್ಲಿ ಆರೋಪಿಗಳ ವಿರುದ್ದ ಮೇಲು ನೋಟಕ್ಕೆ ಸಾಕ್ಷಾಧಾರಗಳು ಕಂಡು ಬಂದ ಕಾರಣ ಅವರ ವಿರುದ್ದ ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣಾ ವರದಿ ಸಲ್ಲಿಸಿದ್ದೇನೆ. ಈ ದಿವಸ 1 ಮತ್ತು 2 ನೇ ಆರೋಪಿತರು ಮಾನ್ಯ ನ್ಯಾಯಾಲಯದಲ್ಲಿ ಹಾಜರು ಇರುತ್ತಾರೆ.

**<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಜಿ ವಿ ವಕೀಲರಿಂದಃ</u>**

ನಿಪಿ-1 ದೂರಿನ ಪ್ರಕಾರ ದೂರುದಾರರ ಕಾಂಪೌಂಡ್ ಒಳ ಭಾಗದಲ್ಲಿ ಆರೋಪಿಗಳು ಗಲಾಟೆ ಮಾಡಿದ್ದಾರೆ ಎನ್ನುವ ರೀತಿ ಇದೆ ಎಂದರೆ ಸರಿ. ಪಿರ್ಯಾದುದಾರರ ಮನೆ ಸಾರ್ವಜನಿಕ ಸ್ಥಳ ಅಲ್ಲ ಎಂದರೆ ಸರಿ. ಅವರ ಮನೆ ರಾಮಾಂಜಿನೇಯ ನಗರದಲ್ಲಿದೆ ಎಂದರೆ ಸರಿ. ಅವರ ಮನೆಯ ಅಕ್ಕ ಪಕ್ಕ ಸಾಕಷ್ಟು ಮನೆಗಳು ಇವೆ ಎಂದರೆ 1 ಮನೆ ಇದೆ ಎಂದು ನುಡಿದಿದ್ದಾರೆ. ಆ ಸಾಲಿನಲ್ಲಿ ಸಾಕಷ್ಟು ಮನೆಗಳು ಇವೆ ಎಂದರೆ ಸರಿ. ಮದ್ಯಾಹ್ನದ ವೇಳೆ ಸಾಮಾನ್ಯವಾಗಿ ಗಲಾಟೆ ನಡೆದರೆ ಅಕ್ಕ ಪಕ್ಕದ ಮನೆಯವರಿಗೆ ಮತ್ತು ಹತ್ತಿರದಲ್ಲಿದ್ದವರಿಗೆ ಕೇಳಿಸುತ್ತದೆ ಎಂದರೆ ಸರಿ. ಗಲಾಟೆಯ ಬಗ್ಗೆ ಆ ಮನೆಯ ಅಕ್ಕ ಪಕ್ಕದವರು ಮತ್ತು ಕಾಲೋನಿಯವರನ್ನು ವಿಚಾರಿಸಿ ಹೇಳಿಕೆ ಪಡೆದಿಲ್ಲ. ಚಾಸಾ 2 ಮತ್ತು 3 ರವರು ಆ ಕಾಲೋನಿಯ ನಿವಾಸಿಗಳಲ್ಲ ಎಂದರೆ ಸರಿ. ಚಾಸಾ 7 ರವರೂ ಸಹ ಆ ಕಾಲೋಯ ನಿವಾಸಿಗಳಲ್ಲ ಎಂದರೆ ಸರಿ. ಚಾಸಾ 8 ಮತ್ತು ವಿ ರವರು ಚಾಸಾ 1 ರವರ ಮನೆಯ ಸಾಲಿನಲ್ಲಿ ವಾಸವಾಗಿಲ್ಲ ಎಂದರೆ, ಹಿಂಭಾಗದ ಸಾಲಿನಲ್ಲಿ ವಾಸವಾಗಿದ್ದಾರೆ ಎಂದು ಹೇಳುತ್ತಾರೆ. ದೂರುದಾರರ ಮನೆ ವಾರ್ಡ್ ನಂಃ 30 ರಲ್ಲಿ ಬರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಅದರ ಪಕ್ಕದಲ್ಲಿ ವಾರ್ಡ್ ನಂಃ 31 ಇದೆ ಎಂದು ಹೇಳುತ್ತಾರೆ.

ದೂರುದಾರರು ಕೊಟ್ಟ ದೂರಿನಲ್ಲಿ ಚಾಸಾ 9 ರವರು ಆ ಘಟನೆಯನ್ನು ನೋಡಿದ ಬಗ್ಗೆ ಹೇಳಿಲ್ಲ ಎಂದರೆ ಸರಿ. ಚಾಸಾ 7 ಮತ್ತು 8 ರವರಿಗೆ ನೋಟೀಸ್ ಗಳನ್ನು ಕೊಟ್ಟು ಕರೆಸಿದ್ದೆ. ಘಟನೆ ನಡೆಯಿತು ಎಂದು ಹೇಳುವ ದಿನದಿಂದ 8 ತಿಂಗಳು ಆದ ನಂತರ ಈ ದೂರು ಕೊಟ್ಟಿದ್ದಾರೆ ಎಂದರೆ ಸರಿ. ಅಷ್ಟು ತಡವಾಗಿ ದೂರು ಸಲ್ಲಿಸಲು ಯಾವುದೇ ಸಕಾರಣ ಕೊಟ್ಟಿಲ್ಲ ಎಂದರೆ ಸರಿ.

ದೂರುದಾರರು ಮತ್ತು ಆರೋಪಿಗಳ ಮಧ್ಯೆ ನ್ಯಾಯಾಲಯದಲ್ಲಿ ಸಿವಿಲ್ ಪ್ರಕರಣ ನಡೆಯುತ್ತಿದೆ ಎಂದರೆ ಸರಿ. ಆ ಪ್ರಕರಣ ಯಾವ ಸ್ಥಿತಿಯಲ್ಲಿದೆ ಎನ್ನುವ ಬಗ್ಗೆ ದಾಖಲೆ ಸಲ್ಲಿಸಿಲ್ಲ ಎಂದರೆ ಸರಿ. ದೂರುದಾರರು ಸಲ್ಲಿಸಿದ್ದ ಅಸಲು ದಾವೆ 261/2023 ವಜಾ ಆಗಿದೆ ಎಂದರೆ ನನಗೆ ಗೊತ್ತಿಲ್ಲ.

ದಿಃ 8-7-2023 ರಂದು ಚಾಸಾ 6 ತನ್ನ ತಾಯಿಗೆ ದೂರವಾಣಿ ಕರೆ ಮಾಡಿದ ಬಗ್ಗೆ ಸಿ ಡಿ ಆರ್ ಪಡೆದಿಲ್ಲ. ಯಾವ ಮೊಬೈಲ್ ಸಂಖ್ಯೆ ಮೂಲಕ ಯಾವ ಮೊಬೈಲ್‌ಗೆ ದೂರವಾಣಿ ಕರೆ ಮಾಡಲಾಗಿತ್ತು ಎನ್ನುವ ಬಗ್ಗೆ ತಿಳಿಸಿಲ್ಲ ಎಂದರೆ ಸರಿ. ಯಾವ ಕಂಪನಿಯ ಲ್ಯಾಪ್ ಟಾಪ್‌ನ್ನು ತೆಗೆದುಕೊಂಡು ಹೋಗಿದ್ದೆವು ಎನ್ನುವ ಬಗ್ಗೆ ನಿಪಿ-2 ರಲ್ಲಿ ನಮೂದು ಮಾಡಿಲ್ಲ ಎಂದರೆ ಸರಿ. ನಾನು ಹೇಳುವಂತೆ ಯಾವುದೇ ಸಾಕ್ಷಿದಾರರು ಸ್ವಇಚ್ಛೆಯಿಂದ ಬಂದು ಹೇಳಿಕೆ ಕೊಟ್ಟಿಲ್ಲ. ಕೇವಲ ದೂರುದಾರರೇ ಸಾಕ್ಷಿದಾರರನ್ನು ಪಂಚನಾಮೆ ಕಾಲಕ್ಕೆ ಕರೆದುಕೊಂಡು ಬಂದಿದ್ದರು ಎಂದರೆ ಸರಿಯಲ್ಲ. ನಿಪಿ-15 ರಲ್ಲಿ ನಾನು ಸ್ಥಳದ ಚೆಕ್ಕು ಬಂದಿಯನ್ನು ಮತ್ತು ದಿನಾಂಕವನ್ನು ಬರೆದಿಲ್ಲ. ಮನೆಯ ಸಂಖ್ಯೆ, ವಿವರ ಮತ್ತು ವಿಸ್ತೀರ್ಣವನ್ನು ನಮೂದು ಮಾಡಿಲ್ಲ. ಸದರಿ ದಾಖಲೆಗೆ ಯಾವುದೇ ಸಾಕ್ಷಿದಾರರ ಸಹಿ ಪಡೆದಿಲ್ಲ ಎಂದರೆ ಸರಿ. ನಿಪಿ-15 ರ ಪ್ರಕಾರ ಕೃತ್ಯ ನಡೆದ ಸ್ಥಳ ಕಾಂಪೌಂಡ್ ಒಳ ಭಾಗದಲ್ಲಿದೆ ಎಂದರೆ ಸರಿ. ಆರೋಪಿಯ ಮನೆ ಯಾವ ಭಾಗದಲ್ಲಿ ಬರುತ್ತದೆ ಎನ್ನುವುದನ್ನು ತೋರಿಸಿಲ್ಲ ಎಂದರೆ ಸರಿ. ನಿಪಿ-3 ರಲ್ಲಿ ಕಾಂಪೌಂಡ್, ಸಂಪು ಮತ್ತು ಯಾವುದೇ ಭಾಗ ಜಖಂ ಆಗಿರುವುದು ಕಂಡು ಬರುತ್ತಿಲ್ಲ ಎಂದರೆ ಸರಿ. ಫೋಟೋ ತೆಗೆದ ಬಗ್ಗೆ ಸಿಡಿ ಮತ್ತು ದೃಢೀಕರಣ ಪತ್ರ ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ. ನಿಪಿ-12 ರ ನಕಾಶೆಗೂ ಮತ್ತು ನಿಪಿ-15 ರ ನಕಾಶೆಗೂ ವ್ಯತಾಸ ಇದೆ ಎಂದರೆ ಸರಿಯಲ್ಲ.

ದಿಃ8-7-2023 ರಂದು ಗಾಯ ಆಗಿದ್ದ ಬಗ್ಗೆದೂರು ನೀಡಿದ್ದು ಆದರೆ ಆ ದಿವಸ ಚಿಕಿತ್ಸೆ ಪಡೆದ ಬಗ್ಗೆ ದಾಖಲೆ ಒದಗಿಸಿಲ್ಲ ಎಂದರೆ ಸರಿ. ನಿಪಿ-6 ಮತ್ತು 7

ರಲ್ಲಿ ದಿಃ 10-7-2023 ರಂದು ಆಸ್ಪತ್ರೆ ಗೆ ಹೋಗಿದ್ದ ಬಗ್ಗೆ ನಮೂದು ಇದೆ ಎಂದರೆ ಸರಿ. 2 ದಿವಸ ತಡವಾಗಿ ಆಸ್ಪತ್ರೆ ಹೋಗಲು ಕಾರಣ ತಿಳಿಸಿಲ್ಲ. ನಾನು ಸರಿಯಾದ ತನಿಖೆಮಾಡದೇ ಕೇವಲ ದೂರುದಾರರ ಮಾತು ಕೇಳದೇ ಆರೋಪಿಗಳ ಯಾವುದೇ ತಪ್ಪು ಇಲ್ಲದೇ ಇದ್ದರೂ ಅವರಿಗೆ ತೊಂದರೆ ಕೊಡಲು ಸುಳ್ಳು ದೋಷಾರೋಪಣಾ ವರದಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಹೇಳಿಕೆಗಳನ್ನು ಕೇಸಿಗಾಗಿ ತಯಾರು ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).**

ಓ. ಹೇ. ಕೆ. ಸರಿ ಇದೆ.

**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ವಿಶೇಷ ನ್ಯಾಯಾಲಯ, ಬಳ್ಳಾರಿ.**